ಹಾಕತೊಡಗಿದರು. ಅದೆಲ್ಲಿತ್ತೋ ಕಾಣೆ ಆ ಹುಡುಗನ ಅಜ್ಜಿ "ಮಗೀನ್ ಎದೆ ಮೇಲೆ ಹೆಂಟೆ ಹಾಕಬೇಡ್ರಪ್ಪಾ, ನವ್ವಾಗುತ್ತೆ ನನ್ ಮಗೀಗೆ" ಅಂತ ಓಡೋಡಿ ಬಂತು. ಗುಂಡಿ ತೋಡುವವರು ಬಂದು ಹೆಂಟೇನೆಲ್ಲಾ ಪುಡಿ ಮಾಡಿದ್ರು. ಹೆಣ ಹೂಳಿದ ಸಾಯಂಕಾಲ ನೆಂಟರೆಲ್ಲಾ ಹೋದಮೇಲೆ ಆ ಅಜ್ಜಿನೇ ಮನೆಯವರಿಗೆ ಟೀ ಮಾಡ್ತು. ಅಲ್ಲೇ ಇದ್ದ ನನಗೂ ಕೊಡ್ತು. ಬೇಡಾ ಅಂದ್ರೂ ಕೇಳಲಿಲ್ಲ. "ವತಾರೆಯಿಂದ ನಮ್ ಜೊತೆನೆ ಇದ್ದೀಯಾ ಕುಡಿಯಪ್ಪ, ಹೋದೋನು ತಿರುಗಿ ಬರಲ್ಲಾ ಕಣಪ್ಪಾ ಕುಡಿ" ಅಂತ ಬಲವಂತ ಮಾಡ್ತು.

''ಫೆಂಟ್ಯಾಸ್ಟಿಕ್'' ಎಂಬ ಸಣ್ಣ ದನಿ ಸಂಪಾದಕರಿಂದ ಬಂತು. ವೆಂಕಟೇಶ ಮುಂದುವರಿಸಿದ.

ಆ ಸತ್ತ ಯುವಕನ ಅಪ್ಪಅಮ್ಮ ಆಸ್ಪತ್ರೆಗೆ ಹೋದಾಗಿನಿಂದಲೂ ಏನೂ ತಿಂದಿರಲಿಲ್ಲ. ಯಾರು ಬಲವಂತ ಮಾಡಿದರೂ ಹನಿ ನೀರೂ ಮುಟ್ಟಲಿಲ್ಲ. ನಡುಮನೆಯಲ್ಲಿ ಮೂಟೆಗಳಿಗೆ ಒರಗಿಕೊಂಡು ಸುಮ್ಮನೇ ಕುಳಿತಿದ್ದರು. ಸಂಜೆ ಎಂಟು ಗಂಟೆ ಹೊತ್ತಿಗೆ ಒಬ್ಬರು ಬಂದರು. ಪಕ್ಕದೂರಿನವರಂತೆ. ಯುವಕನ ಅಪ್ಪನ ಭುಜಗಳನ್ನು ಹಿಡಿದು ಜೋರಾಗಿ ಅಲ್ಲಾಡಿಸಿದರು. ಏನೇನೋ ಮಾತಾಡುತ್ತಿದ್ದರು. ಕೆಲವೊಮ್ಮೆ ದನಿ ಎತ್ತರಿಸುತ್ತಿದ್ದರು, ಕೆಲವೊಮ್ಮೆ ಸಣ್ಣಗೆ. ಮಾತುಗಳಿಗೆ ಒಂದಕ್ಕೊಂದು ಸಂಬಂಧವಿಲ್ಲ ಎನಿಸುತ್ತಿತ್ತು. ಗುಡಿಸಲು, ಎದೆ ಉದ್ದದ ಮಗ, ಬೆಂಕಿ, ಬರ್ರೋ ಅಂತ ಗಾಳಿ, ನೀರು, ಸೊಪ್ಪು, ಹೋಗೇಬಿಟ್ಟ, ದೇವರಿಗೆ ಬೇಕಾಗಿತ್ತು... ಇತ್ಯಾದಿ ಪದಗಳಷ್ಟೇ ಕೇಳಿಸಿತು. ಇದ್ದಕ್ಕಿದ್ದಂತೆ ಎದೆಗೆ ಎರಡೂ ಕೈಯಿಂದ ಹೊಡೆದುಕೊಂಡರು. "ನಾನ್ ಬದ್ಕಿದೀನೋ ಇಲ್ವೋ" ಎಂದು ಕೇಳಿ ಇಬ್ಬರನ್ನೂ ಅಂಗಳಕ್ಕೆ ಎಳೆದುಕೊಂಡೇ ಬಂದರು. ಅನ್ನ ಕಲೆಸಿಕೊಂಡು ಬರಲು ಹೇಳಿ ಊಟ ಮಾಡುವಂತೆ ಗದರಿಸಿ ನಾಲ್ಕು ತುತ್ತು ತಿನ್ನಿಸಿಯೇ ಬಿಟ್ಟರು. ನಾಲ್ಕು ವರ್ಷದ ಹಿಂದೆ ಆ ವ್ಯಕ್ತಿಯ ಮಗ ಗುಡಿಸಲಿಗೆ ಬೆಂಕಿ ಹತ್ತಿಕೊಂಡು ಸತ್ತು ಹೋಗಿದ್ದನೆಂದು ಆನಂತರ ತಿಳಿಯಿತು.

ವೆಂಕಟೇಶ ಮಾತು ಮುಗಿಸಿದ. ತುಂಬಾ ಹೊತ್ತು ಸುಮ್ಮನೇ ಇದ್ದ ಸಂಪಾದಕರು "ವರದೀನ ಮತ್ತೆ ರೀರೈಟ್ ಮಾಡಿ, ಈಗ ಹೇಳಿದ್ದನ್ನೆಲ್ಲಾ ಸೇರಿಸಿ, ಇದಕ್ಕೆ ಮುಂಚೆ ನೋಡಿದ ಸಾವುಗಳ ವರದಿಗಳನ್ನೂ ಜೋಡಿಸಿ" ಎಂದರು.

★★★

"ಡೆತ್ ಅಸೈನ್‌ಮೆಂಟ್ ವರದಿಯಲ್ಲಿ ಸತ್ತಿರೋರಿಗಿಂತ್ಲೂ ಬದುಕಿರುವವರ ಬಗ್ಗೆ ಬರೆದಿರೋದೇ ಚೆನ್ನಾಗಿದೆ. ಬಹುಶಃ ಸಾವು ಬದುಕಿರೋರಲ್ಲೇ ಬದುಕಿರುತ್ತೆ ಅಂತ ಕಾಣುತ್ತೆ..." ಎಂದ ಪ್ರಸನ್ನ. ವೆಂಕಟೇಶ ಸುಮ್ಮನೇ ಮುಗುಳ್ನಕ್ಕ.

## ಮಲ್ಲಿಕಾರ್ಜುನ ಹೊಸಪಾಳ್ಯ

ಹುಟ್ಟೂರು ತುಮಕೂರು ಜಿಲ್ಲೆ ಹೊಸಪಾಳ್ಯ. ಒಕ್ಕಲುತನದ ಕುಟುಂಬ. ಅರ್ಥಶಾಸ್ತ್ರ ಹಾಗೂ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ. ಹವ್ಯಾಸಿ ಬರಹಗಾರ. ದೇಸಿ ತಳಿ, ಜಲಸಂರಕ್ಷಣೆ, ಸುಸ್ಥಿರ ಕೃಷಿ, ಸಿರಿಧಾನ್ಯ ಚಟುವಟಿಕೆಗಳಿಗೆ ಬೆಂಬಲ ನೀಡುತ್ತಿದ್ದಾರೆ.

'ನೆಟ್ಟಿರಾಗಿ', 'ಕೃಷಿ ಆಚರಣ', 'ಪೈರುಪಚ್ಚೆ', 'ಕೊರಲೆ', 'ಚೌಳು ನೆಲದ ಬಂಗಾರ', 'ಸಿರಿಧಾನ್ಯ ಪರಂಪರೆ', 'ನಶಿಸುತ್ತಿರುವ ನೀರಿನ ಜ್ಞಾನ', 'ತಲಪರಿಗೆ' ಸೇರಿದಂತೆ 13 ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಲಲಿತ ಪ್ರಬಂಧಗಳ ಸಂಕಲನ 'ತೇಜಸ್ವಿ ನೆನಪಲ್ಲಿ ಅಲ್ಮೆರಾ ರಿಪೇರಿ' ಅಚ್ಚಾಗಿದೆ.